MVC No. 392/2024

PW-1

**(ಇಂದು ದಿಃ 25-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಪಾಟೀ ಸವಾಲುಃ-2 ನೇ ಎದುರುದಾರರ ಪರ ಶ್ರೀ.BSK ವಕೀಲರಿಂದಃ-**

ಅಪಘಾತ ಆದಾಗ ನಾನು ಮಾಲೀಂಗರಾಯ ಮೋಟರ್ ಸೈಕಲ ಮೇಲೆ ಹೋಗುತ್ತಿದಾಗ ಅಪಘಾತ ಆಗಿದೆ. ಮಾಲೀಂಗರಾಯ ಮೋಟರ್ ಸೈಕಲ ಚಾಲನೆ ಮಾಡುತ್ತಿದ್ದ. ನಾನು ಹಿಂಬದಿ ಸವಾರನಾಗಿದ್ದೆ ಆಗ ಇನ್ನೊಂದು ಮೋಟರ್ ಸೈಕಲ ಸವಾರ ಹಿಂದಿನಿಂದ ಬಂದು ನಮ್ಮ ಮೋಟರ್ ಸೈಕಲಗೆ ಡಿಕ್ಕಿಪಡಿಸಿದ್ದರಿಂದ ಅಪಘಪಿಾತ ಆಗಿದೆ. ಪೊಲೀಸರಿಗೆ ಮಾಲೀಂಗರಾಯ ನ ತಾಯಿ ದೂರು ನೀಡಿದ್ದಾರೆ . ಈ ಅಪಘಾತದಲ್ಲಿ ಮಾಲೀಂಗರಾಯು ತೀರಿ ಹೋಗಿದ್ದಾರೆ . ನನಗೆ ದೂರಿನ ಸಂಗತಿಗಳು ಗೊತ್ತಿಲ್ಲ. ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ. ಸದರಿ ಹೇಳಿಕೆಯ ನಕಲನ್ನು ಹಾಜರುಪಡಿಸಿಲ್ಲ. ಅಪಘಾತ ಹೇಗೆ ಆಯಿತು ಎಂದು ಮಾಳಮ್ಮ ರವರಿಗೆ ನಾನು ಹೇಳಿಲ್ಲ. ಮಾಳಮ್ಮ ದೂರಿನಲ್ಲಿ ಅಪಘಾತದ ಬಗ್ಗೆ ಅವಳಿಗೆ ನಾನು ಮಾಹಿತಿ ನೀಡಿದ್ದೇನೆ ಎಂದು ಹೇಳಿ ಬರೆಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪೊಲೀಸರು ಮಾಲೀಂಗರಾಯ ಮತ್ತು ಇನ್ನೊಂದು ಮೋಟರ್ ಸೈಕಲ ಸವಾರನ ವಿರುದ್ದ ಅಪಾದನೆ ಮಾಡಿದ್ದಾರೆ ಎಂದರೆ ಸರಿ. KA 32 EA 0707 ನನ್ನ ಹೆಸರಿನಲ್ಲಿದೆ ಎಂದರೆ ಸರಿ. ದೂರಿನಲ್ಲಿ ಮಾಳಮ್ಮ ರವಿಕುಮಾರ ನಿದಾನಕ್ಕೆ ಚಾಲನೆ ಮಾಡು ಎಂದು ಮಾಲೀಂಗರಾಯನಿಗೆ ಹೇಳಿದರು ಕೂಡ ಆತ ವೇಗ ವಾಗಿ ಚಾಲನೆ ಮಾಡಿ ಅಪಘಾತ ಪಡಿಸಿದ ಎಂದು ಹೇಳಿ ಬರೆಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪೊಲೀಸರು ಸಲ್ಲಿಸಿದ ಅಂತೀಮ ವರದಿಯನ್ನು ನಾನು ಪ್ರಶ್ನೆ ಮಾಡಿಲ್ಲ. ನಾನು ಪೊಲೀಸ್ ಠಾಣೆಯಿಂದ ನನ್ನ ಮೋಟರ್ ಸೈಕಲನ್ನು ಬಿಡುಗಡೆ ಮಾಡಿಕೊಂಡಿದ್ದೇನೆ. ಮಾಳಮ್ಮ ದೂರಿನಲ್ಲಿ ಹೇಳಿ ಬರೆಸಿರುವಂತೆ ನಾನು ಕೂಡ ಪೊಲೀಸರಿಗೆ

ನೀಡಿದ ಹೇಳಿಕೆಯಲ್ಲಿ ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸರ ಮುಂದದೆ ನೀಡಿದ ಹೇಳಿಕೆಯನ್ನು ಹಾಜರುಪಡಿಸಿದರೆ ಅಪಘಾತ ಮಾಲಿಂಗರಾಯನ ತಪ್ಪಿನಿಂದ ಆಗಿದೆ ಎಂದು ಗೊತ್ತಾಗುತ್ತದೆ ಎಂದು ಅದನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಅಪಘಾತಕ್ಕೆ ಒಳಗಾದ KA 32 EA 0707 ಮೋಟರ್ ಸೈಕಲಗೆ ನಾನೇ ಮಾಲೀಕನಾಗಿರುವ ಕಾರಣ ಈ ನ್ಯಾಯಾಲಯದಲ್ಲಿ ನಾನು ಪರಿಹಾರ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಮಾಲೀಂಗರಾಯನ ತಪ್ಪಿ ನಿಂದ ಮಾತ್ರ ಅಪಘಾತ ಆಗಿದ್ದರು ಕೂಡ ಮಾಲೀಂಗರಾಯನ ವಾರಸುದಾರರಿಗೆ ಮತ್ತು ನನಗೆ ಪರಿಹಾರ ಪಡೆಯಲು ಅನುಕೂಲವಾಗಲಿ ಎಂದು ಇನ್ನೊಂದು ಮೋಟರ್ ಸೈಕಲ ಸವಾರ ಮತ್ತು ಮಾಲೀಂಗರಾಯನ ವಿರುದ್ದ ಸುಳ್ಳು ದೂರು ನೀಡಿದ್ದೇವೆ ಎಂದರೆ ಸರಿಯಲ್ಲ.

ನಾನು ಅವಿದ್ಯಾವಂತ. ನನ್ನ ವಯಸ್ಸು ತೋರಿಸಲು ನನ್ನ ಆದಾರ ಕಾರ್ಡ ಹಾಜರುಪಡಿಸಿದ್ದೇನೆ.ಆದಾರ ಕಾರ್ಡನಲ್ಲಿ ನನ್ನ ಜನ್ಮ ದಿನಾಂಕ 01.01.1987 ಎಂದು ಇರುವುದು ಸರಿ ಇದೆ. ಅಪಘಾತ ಆದಾಗ ನನಗೆ 35 ವರ್ಷ ವಯಸ್ಸು ಆಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

MVC No. 392/2024

PW-1

ಆಗ ನನಗೆ 36 ವರ್ಷ ಎಂದರೆ ಸರಿಯಲ್ಲ, ಅಪಘಾತಕ್ಕಿಂತ ಮುಂಚೆ ನಾನು ಖಾಸಗಿ ಕೆಲಸ ಮಾಡಿ ತಿಂಗಳಿಗೆ 25,000/- ಸಂಪಾದನೆ ಮಾಡುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ಅಪಘಾತದ ನಂತರ ನನ್ನನ್ನು ಸೇಡಂ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು . ಅಲ್ಲಿಂದ ಜಿಲ್ಲಾ ಆಸ್ಪತ್ರೆಗೆ ಮತ್ತು ಅಲ್ಲಿಂದ ಮನ್ನೂರು ಆಸ್ಪತ್ರೆಗೆ ಕರೆದುಕೊಂಡು ಹೋದರು. ಮನ್ನೂರು ಆಸ್ಪತ್ರೆಯಲ್ಲಿ 25 ದಿನ ಒಳ ರೋಗಿಯಾಗಿದ್ದೆ. ಮನ್ನೂರ ಆಸ್ಪತ್ರೆಯಲ್ಲಿ ಡಿಸ್ ಚಾರ್ಜ ಆದಾಗ ನಾನು ಸಂಪೂರ್ಣ ಗುಣಮುಖ ಆಗಿದ್ದು ನನಗೆ ಯಾವುದೇ ಅಂಗ ನ್ಯೂನ್ಯತೆ ಉಂಟಾಗಿಲ್ಲ ಎಂದರೆ ಸರಿಯಲ್ಲ, ಡಿಸ್ ಚಾರ್ಜ ಆದ ನಂತರ ಮುಂದುವರೆದ ಚಿಕಿತ್ಸೆ ಪಡೆದುಕೊಂಡಿದ್ದೇನೆ. ಆ ಬಗ್ಗೆ ದಾಖಲಾತಿ ಹಾಜರುಪಡಿಸಿಲ್ಲ, ನಾನು ಸುಳ್ಳು ಅಂಗ ನ್ಯೂನ್ಯತಾ ಪ್ರಮಾಣ ಪತ್ರ ಹಾಜರುಪಡಿಸಿದ್ದೇನೆ ಎಂದರೆಸರಿಯಲ್ಲ, ನಾನು ಮೊದಲಿನಂತೆ ಕೆಲಸ ಮಾಡಲು ಶಕ್ತ ನಿದ್ದರು ಕೂಡ ಕೆಲಸ ಮಾಡಲು ಆಗುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ನಾನು ವೈದ್ಯಕೀಯ ಬಿಲ್ಲುಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ, ವೈದ್ಯಕೀಯ ಚಿಕಿತ್ಸೆಗೆ 3,50,000/- ಖರ್ಚಾಗಿದೆ ಮತ್ತು ಮುಂದಿನ ಚಿಕಿತ್ಸೆಗೆ 2,50,000/- ಬೇಕು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ,

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**